**2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಬಳ್ಳಾರಿ**

**ಓ.ಎಸ್. ನಂ.242-2017** **ಡಿಡಬ್ಲ್ಯೂ ನಂ2.**

ಸಾಕ್ಷಿಯ ಹೆಸರು : ಕುಂಬರ ನಾಗರಾಜ್ ಅಲಿಯಾಸ್ ನಾಗಪ್ಪ

ತಂದೆಯ ಹೆಸರು : ಶಿವಲಿಂಗಪ್ಪ ಕುಂಬರ

ವಯಸ್ಸು : 47

ಉದ್ಯೋಗ : ಭೂಮಾಪಕ

ಸ್ಥಳ : ಭ್ರಮವರಾ

ದಿನಾಂಕ **:** 07.02.2024 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಮುಖ್ಯವಿಚಾರಣೆ : 1 ನೇ ಪ್ರತಿವಾದಿ ಪರ ಶ್ರೀ ಎಸ್.ವೈ.ಎಸ್ ವಕೀಲರಿಂದ,**

ನಾನು ಬಳ್ಳಾರಿ ತಾಲೂಕು ಕಚೇರಿಯಲ್ಲಿ ಮೇ 2005 ರಿಂದ ಸೆಪ್ಟೆಂಬರ್ 2013 ರವರೆಗೆ ಕೆಲಸ ಮಾಡಿರುತ್ತೇನೆ. ನಾನು ತಾಲೂಕು ಭೂಮಾಪಕರಾಗಿ ಬಳ್ಳಾರಿ ತಾಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ಭೂಮಿಗೆ ಸರ್ವೇ ಮಾಡಲು ಸಾರ್ವಜನಿಕರು ಅರ್ಜಿ ಕೊಡುವುದು ಸಹಜ ಇರುತ್ತದೆ. ಅಧಿಕಾರಿಗಳ ಆದೇಶದಂತೆ ನಾನು ದಿನಾಂಕವನ್ನು ನಿಗದಪಡಿಸಿ ಭೂಮಿಯನ್ನು ಸರ್ವೇ ಮಾಡುತ್ತೇನೆ. ನಾಗಪ್ಪ ತಂದೆ ಶಿವಣ್ಣ ಅವರು ನನಗೆ ನಿರ್ಧಿಷ್ಟವಾಗಿ ಏನು ಇಂತಹ ಜಮೀನನ್ನು ಸರ್ವೇ ಮಾಡಲು ಅರ್ಜಿ ಕೊಟ್ಟಿರುವುದಿಲ್ಲ ತಾಲೂಕು ಕಚೇರಿಗೆ ಕೊಟ್ಟಿರುತ್ತಾರೆ. ತಾಲೂಕು ಕಚೇರಿಗೆ ಕೊಟ್ಟ ನಂತರ ಅದು ಮುಂದಿನ ಕ್ರಮಕ್ಕಾಗಿ ನನಗೆ ಕಳುಹಿಸಿಕೊಡುತ್ತಾರೆ . ಸರ್ವೇಗೆ ಅರ್ಜಿ ಬಂದಾಗ ಒಬ್ಬರು ಅರ್ಜಿದಾರರು ಇದ್ದರೆ ಅವರಿಗೆ ನೋಟಿಸ್ ಕೊಡುತ್ತೇವೆ ಜಂಟಿ ಅರ್ಜಿದಾರರು ಇದ್ದರೆ ಇಬ್ಬರಿಗೂ ನೋಟಿಸ್ ಕೊಡುತ್ತೇವೆ. ನೋಟಿಸ್ ಕೊಟ್ಟ ನಂತರ ನಿಗಧಿಪಡಿಸಿದ ದಿನಾಂಕಕ್ಕೆ ನಾನು ಅಲ್ಲಿ ಹೋಗುವುದು ಸಹಜ. ನೋಟಿಸ್ ಕೊಟ್ಟ ನಂತರ ಸ್ಥಳಕ್ಕೆ ಹೋಗಿ ಅರ್ಜಿದಾರರ ಸಮಕ್ಷಮ ಅಳತೆ ಮಾಡುತ್ತೇನೆ. ಅಲ್ಲಿ ಏನಾದರೂ ಸಮಸ್ಯೆ ಬಂದರೆ ನಾನು ಅದನ್ನು ವರದಿ ಮಾಡುತ್ತೇನೆ. ಅದು

ಮುಗಿದ ನಂತರ ವರದಿಯನ್ನು ನಾನು ಕಚೇರಿಗೆ ಸಲ್ಲಿಸುತ್ತೇನೆ. ನಾನು ವರದಿಗೆ ಸಹಿ ಮಾಡಿ ಕೊಡುತ್ತೇನೆ.

**(ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**